ರೈಲ್ವೆ ಯ ಪಟ್ಟೆಯಲಿ
ರೈಲು ಬರುತಿದೆ ಪಟ್ಟೆಯಲಿ
ಸಿಗ್ನಲ್ ಅಂತೂ ಬೆಳಗುತಿದೆ

ವಿದ್ಯೆ ಇಲ್ಲ ಮಗುವಿಗೆ
ಕೂತಿದೆ ಏನೊ ಚಿಂತಿಸತಾ
ಪ್ಲಾಸ್ಟಿಕ್ ತುಂಬಿದೆ ಪರಿಸರದಲಿ
ನೊಣ ರಾಶಿಯೇ ಕೂತಿದೆ

ಬಡವನ ವಾಸ ಕೊಳೆಗೇರಿಯಲಿ
ವಿದ್ಯೆ ಇಲ್ಲದ ಲೋಕದಲಿ
ಜೀವನ ಪೂರ್ತಿ
ಈ ನರಕದಲಿ
ಈ ನರಕದಲಿ

*yathin raj.m* 9B

SDPHSD

# ನಾನೊಂದು ಹಕ್ಕಿಯಾಗಿದ್ದರೆ

ನಾನೊಂದು ಹಕ್ಕಿಯಾಗಿದ್ದರೆ
ಸ್ವಾತಂತ್ರ್ಯದಿಂದ ಹಾರಾಡುತ್ತಾ ನಾನು
ಆಕಾಶದಲ್ಲಿ ಹಾರುವೆನು.

ಸಂಪತ್ತಿನ ಕಾಡಿನಲ್ಲಿ
ಆಹಾರಕ್ಕಾಗಿ ಹೋಗುವೆನು.
ಕಾಡನು ಹಾಳು ಮಾಡದೆ ನಾ
ಆಹಾರವನ್ನು ತರವೆನು.

ನಿದ್ದೆಯ ಗುಗ್ಗು ಮಾನವನಿಗೆ
ಚಿಲಿಪಿಲಿಗುಟ್ಟುತ ನಾ
ಬೆಳಗಿನ ಸೊಬಗನು ತೋರಿಸುವೆ.

ಮರದಲ್ಲೊಂದು ಗೂಡನು ಕಟ್ಟಿ
ಮೊಟ್ಟೆಯನಿರಿಸಿ ಕಾವನು ಕೊಡುತ
ಮರಿಗಳ ಬೆಳೆಸಿ
ಒಗ್ಗಟ್ಟಿನಿಂದ ಬಾಳುವೆ ನಾ.

ಸಂಜೆಯ ಸಮಯದಿ
ಗೂಡನು ತಲುಪಿ
ನಿಶ್ಚಿಂತೆಯಿಂದ ಮಲಗುವೆ ನಾ.

SDPHSD
Jelespi roy 9B

# ಹಾಸಿಗೆ ಇದ್ದಷ್ಟ ಕಾಲು ಚಾಚು

ಒಂದು ಊರಿನಲ್ಲಿ ರಾಜಶೇಕರನೆಂಬ ರಾಜನಿದ್ದನು. ಅವನು ತುಂಬ ಜಿಪುನನಾಗಿದ್ದನು ಹಾಗೆಯೇ ಕೆಟ್ಟವನು. ಅವನಲ್ಲಿ ತುಂಬಾ ತೋಟ, ಹೊಲ , ಗದ್ದೆಗಳಿದ್ದವು.

ರಾಜಶೇಕರನ ಕೆಲಸದವರಲ್ಲಿ ಸಿದ್ದ ಎಂಬವನು ಒಬ್ಬ ಅವನು ತುಂಬಾ ಕಷ್ಟ ಜೀವಿ . ಅವನಿಗೆ ಮನೆ ಇಲ್ಲದೆ ರಾಜನ ಹಟ್ಟಿಯಲ್ಲೇ ಮಲಗುತ್ತಿದ್ದನು.

ಒಂದು ದಿನ ಸಿದ್ದನಿಗೆ ತುಂಬಾ ಜ್ವರವಿತ್ತು. ಕೆಲಸಮಾಡಲು ಸಾಧವಾಗುತ್ತಿರಲಿಲ್ಲ. ಆ ವಿಷಯ ರಾಜನಿಗೆ ತಿಳಿದು ಅವನನ್ನು ಕೆಲಸದಿಮದಿಂದ ತೆಗೆದು ಹೊರ ಊರಿಗೆ ಬಿಟ್ಟು ಬಂದರು. ಜ್ವರದಿಂದ ತಡೆಯಲಾಗದ ಸಿದ್ದ ಅಲ್ಲೇ ಮಲಗಿ ಬಿಟ್ಟನು. ಆ ದಾರಿಯಾಗಿ ಬಂದ ಆ ಊರಿನ ರಾಜ ಧರ್ಮರಾಯ ಸಿದ್ದನನ್ನು ಕರೆದೊಯ್ದು, ಜಿಕಿತ್ಸೆ ನೀಡಿದನು. ಸದ್ದ ಗುಣಮುಖನಾದನು. ಅವನಿಗೆ ಅರಮನೆಯಲ್ಲೇ ಕೆಲಸ ಕೊಟ್ಟು ೧ ಹೊಲ ಕೊಟ್ಟನು. ಅದರಲ್ಲಿ ಸಿದ್ದ ಕಷ್ಟಪಟ್ಟು ದುಡಿದು ಒಳ್ಳೆ ಹಣ ಸಂಪಾದಿಸಿ ಶ್ರೀಮಂತನಾದನು. ಆದರು ಅವನು ಅರಮನೆಯಲ್ಲೇ ಕೆಲಸಮಡುತ್ತಿದ್ದನು. ಈ ವಿಷಯ ರಾಜಶೇಕರನಿಗೆ ತಿಳಿದು ಸಿದ್ದನಲ್ಲಿ ಶ್ರೀಮಂತನಾದ ವಿಶಯ ಕೇಳುತ್ತಾನೆ. ಅದನ್ನು ಕೇಳಿ ರಾಜಶೇಕರನು ಧರ್ಮರಾಯನ ಮುಂದೆ ಅವನಿಗೆ ಗತಿಯಿಲ್ಲದಂತೆ ನಟಿಸಿ ಧರ್ಮರಾಯನ ಅರಮನೆಯಲ್ಲೇ ಕೆಲಸಕ್ಕೆ ಸೇರುತ್ತಾನೆ . ಧರ್ಮರಾಯನಿಗೆ ರಾಜಶೇಕರನ ಬಗ್ಗೆ ಎಲ್ಲಾ ತಿಳಿದಿತ್ತು. ಧರ್ಮರಾಯ ರಾಜಶೇಕರನಕೊಬ್ಬು ಕರಗಿಸಲು ಅವನಿಗೆ ಕಷ್ಟಕೊಟ್ಟು ದುಡಿಸುತ್ತಾನೆ . ಆ ಕಷ್ಟವನ್ನು ಸಹಿಸದೆ ರಾಜಶೇಕರನು ಆ ಅರಮನೆಯಿಂದ ಬರುತ್ತಾನೆ. ತಾನು ಮಾಡಿದ ತಪ್ಪು ಅರಿತು ಯಾರಿಗೂ ಕಷ್ಟಕೊಡದೆ ನೆಮ್ಮದಿಯ ಬಾಳಿದ.

***Deekshitha.s***
***9E***

# Newton's Law

*I was inattentive in Science class one day*
*When the teacher at random looked my way*
*Ididn't look up, I wouldn't dare*
*There's no escaping that intense glare.*

*Asked me to explain to the class*
*Newton's Law of Gravity and mass*
*My mind was a blank, heartbeats louder*
*For an answer I started to flounder.*

*I stood before the class trumbling with fear*
*“Gravity”,I said ... and then oh dear!!!*

*mushraf* 9B

SDPHSD

# मातृभूमि

मेरी मातृभूमि पर

मुझे बहुत खुश है

देश का धरती पर

मेरा देश है सबसे महान

chaithra.k

9A

SDPHSD

# ಬೆಳಕು ಹಿಡಿದವರು

*ಬೆಳಕು ಹಿಡಿದವರು*
*ಸೂರ್ಯನ ಕಂಡಾಗ ಮುಖ ತಿರುಗಿಸುವುದಿಲ್ಲ*
*ಹೊತ್ತು ಮುಳುಗುವ ಮುನ್ನ*
*ಹಚ್ಚಹಸುರಿನ ಗಿಡಗಳಲ್ಲಿ ಕುಳಿತ*
*ಹಕ್ಕಿಗಳ ಕೊರಳಿಗೆ ದನಿಯಾಗುತ್ತಾರೆ*

*ಬೆಳಕು ಹಿಡಿದವರು*
*ಬೆಳದಿಂಗಳಲ್ಲಿ ಸುಖ ಪಡುವುದಿಲ್ಲ*
*ಹಗಲೆಲ್ಲ ಮರಳ ತಡಯಲ್ಲಿ ಕಾದು*
*ಬಸವಳಿದು ಜೀವಗಳಿಗೆ ನೀರುಣಿಸುತ್ತಾರೆ*

*ಬೆಳಕು ಹಿಡಿದವರು*
*ಸುಳಿಗಾಳಿಗೆ, ಸುರಿವ ಮಳೆಗೆ ಹೆದರುವುದಿಲ್ಲ*
*ನಿಂತ ನೆಲ ಬಿರಿದರೂ ಕದಲುವುದಿಲ್ಲ*
*ಎದೆಯ ಕುಲುಮೆಯಲಿ*
*ತಿದಿಯೊತ್ತಿ ಎಲ್ಲವನು ಬೆಳಗುತ್ತಾರೆ*

*ತುಷಾರ್ .ಯಂ IX A*

SDPHSD

# ಮೊಲ ಮತ್ತು ತೋಳ

ಒಂದು ಊರಿನಲ್ಲಿ ಒಂದು ಮೊಲ ಇತ್ತು. ಆ ಊರಿನ ತೋಟದಲ್ಲಿ ಒಂದು ತೋಳ ಇತ್ತು.
ಮೊಲ ತೋಟದಿಂದ ತರಕಾರಿ ತಂದಿತು. ಕೆಲವು ದಿನಗಳಲ್ಲಿ ತಂದ ತರಕಾರಿ ಖಾಲಿಯಾಗುತ್ತಾ ಬಂದಿತು.
ಒಂದು ದಿನ ಮೊಲ ತೋಟದಿಂದ ತರಕಾರಿ ತರಲು ಹೋಯಿತು. ಆಗ ತೋಳದ ಕೈಗೆ ಸಿಕ್ಕಿಬಿತ್ತು.ತೋಳ
''ನಿನ್ನನ್ನು ನಾನು ತಿಂದು ಬಿಡುತ್ತೇನೆ'' ಎಂದಿತು. ಆಗ ಮೊಲಕ್ಕೆ ಒಂದು ಉಪಾಯ ಹೊಳೆಯಿತು. ಮೊಲ ಹೇಳಿತು.
''ನಾನು ಒಂದು ಔಷಧ ತಯಾರಿಸುತ್ತೇನೆ. ಅದನ್ನು ಕುಡಿದರೆ ನೂರು ಆನೆಯ ಬಲ ಬರುತ್ತದೆ.'' ಆಗ ತೋಳ,
''ಎಲ್ಲಿದೆ ಆ ಔಷಧ? ಕೊಡು'' ಎಂದು ಕೇಳಿತು. ಮೊಲ, ''ನನಗೆ ತಿನ್ನಲು ತುಂಬಾ ಕ್ಯಾರೆಟ್ ಗಳನ್ನು ತಂದು
ಅಲ್ಲಿರುವ ಮರದ ಹತ್ತಿರ ನಿಲ್ಲು'' ಎಂದಿತು.
ತೋಳ ತುಂಬಾ ಕ್ಯಾರೆಟ್ ಗಳನ್ನು ತಂದು ಮರದ ಬಳಿ ನಿಂತಿತು. ಆಗ ಮೊಲ ಒಂದು ಕುಪ್ಪಿಯಲ್ಲಿ ಮೇಣ ತುಂಬಿಸಿ ತೋಳಕ್ಕೆ ಕೊಟ್ಟಿತು. ತೋಳ ಅದನ್ನು ಕುಡಿಯಿತು. ಆಗ ಮೊಲ, ''ಈಗ ನಿನ್ನ ಕಾಟ ತಪ್ಪಿತು,
ನಿನ್ನ ಬಾಯಿ ಇನ್ನು ಅಂಟಿರುತ್ತದೆ. ನಾವಿನ್ನು ಇಲ್ಲಿ ವಾಸಿಸಲು ಯೋಗ್ಯವಾಯಿತು'' ಎಂದಿತು.

*ಶಿವಾನಿ. ಎಸ್ 9A*

SDPHSD

# ಚಿತ್ರ ರಚನೆ ತಾಯಿಯೇ ಮೊದಲ ಗುರು

'ಮನೆಯೇ ಮೊದಲ ಪಾಠಶಾಲೆ, ಜನನಿ ತಾನೇ ಮೊದಲ ಗುರು. ಜನನಿಯಿಂದ ಸಾರ್ವತ್ರಿಕ ಸತ್ಯ. ಒಂದು ಕಟ್ಟಡ ಗಟ್ಟಿಯಾಗಬೇಕಾದರೆ ಅದರ ತಳಪಾಯ ಸುಭದ್ರವಾಗಿರಬೇಕು. ಮಗುವಿನ ಬೆಳವನಣಿಗೆಯಲ್ಲಿ ತಳಪಾಯವಾಗಿ ಕಾರ್ಯ ನಿರ್ವಹಿಸುವುದು ತಾಯಿ. ಪ್ರತಿಯೊಬ್ಬ ವ್ಯಕ್ತಿಯೂ ತಾಯಿಯ ಗರ್ಭದಿಂದ ಜನಿಸಿ, ಆಕೆಯ ಪ್ರೀತಿ ವಾತ್ಸಲ್ಯಗಳಿಂದ ದೊಡ್ಡ ವ್ಯಕ್ತಿಯಾಗುವ ಪ್ರಕ್ರಿಯೆಯೇ ಅಪೂರ್ವ. 'ಕೆಟ್ಟ ಮಕ್ಕಳಿರಬಹುದು, ಆದರೆ ಕೆಟ್ಟ ತಾಯಿ ಇರಲಾರಳು' ವಿದ್ಯಾವಂತ ದೈಹಿಕ ಮಾನಸಿಕ ಹಾಗು ಆಧ್ಯಾತ್ಮಿಕ ಬೆಳವಣಿಗೆಗೆ ತಾಯಿಯ ಪ್ರೇರಣೆ ಹಾಗೂ ಪ್ರೋತ್ಸಾಹವೇ ಮಗುವಿಗೆ ದಾರಿದೀಪ. ನೋವಿರಲಿ ನಲಿವಿರಲಿ ಎಲ್ಲರ ಬಾಯಿಯಲ್ಲಿ ಹೊರಡುವ ಮೊದಲ ಶಬ್ದವೇ 'ಅಮ್ಮಾ'.

ಶ್ರೇಯ.ಎಂ IX E

# ರೈಲು ಗಾಡಿ

ಚುಕ್ ಪುಕ್ ಚುಕ್ ಪುಕ್
ರೈಲು ಗಾಡಿ

ಪೊಂ ಪೊಂ ಎನ್ನುವ
ರೈಲು ಗಾಡಿ

ಸದ್ದನು ಮಾಡುತ
ಬಂದಿತು ನೋಡಿ

ನಮ್ಮಯ ಅಂದದ
ಸುಂದರ ಗಾಡಿ

Thulasi.m
*9E*

# ಐಕ್ಯ ಗಾನ

ಐಕ್ಯವೊಂದೆ ಮಂತ್ರ
ಐಕ್ಯದಿಂದೆ ಸ್ವತಂತ್ರ
ಐಕ್ಯಗಾನದಿ ರಾಷ್ಟ್ರ ತೇಲುತಿರಲಿ
ಭಾರತದಿ ಮಮ ಜನ್ಮ
ಸ್ವಾತಂತ್ರ್ಯವೇ ಧರ್ಮ
ಒಕ್ಕೊರಲಿನುದ್ಘೋಷ ಕೇಳುತಿರಲಿ

ಅರೆಹೊಟ್ಟೆಯುಂಡ ನಾವ್
ಬರಿ ಚಿಂದಿತೊಟ್ಟ ನಾವ್
ಸುಲಿಗೆಗೊಳಗಾದ ನಾವ್ ಎಲ್ಲರೊಂದೇ
ಆಳು ಹೋಳಾಗಿರಲು
ಬಾಳು ಗೋಳಾಗಿರಲು
ಮೇಲು ಕೀಳೇನುಂಟು ಎಲ್ಲರೊಂದೇ

ತುಷಾರ್ 9A

SDPHSD

# ಜಾಣ ನಾಯಿ

ಒಬ್ಬ ಶ್ರೀಮಂತ ತನ್ನ ನಾಯಿಯನ್ನು ಕರೆದುಕೊಂಡು ಆಫ್ರಿಕಾದಲ್ಲಿ ಸಫಾರಿಗೆ ಹೋಗಿದ್ದ. ಒಂದು ದಿನ ಆ ನಾಯಿ ಚಿಟ್ಟೆಗಳನ್ನು ಅಟ್ಟಿಸಿಕೊಂಡು ಹೋಗುತ್ತ ಯಜಮಾನನನ್ನು ಬಿಟ್ಟು ಬಹುದೂರ ಹೋಗಿ ಬಿಟ್ಟಿತ್ತು.
ದಾರಿ ತಪ್ಪಿದ ನಾಯಿ ಅಲ್ಲಿಲ್ಲಿ ಅಲೆಯುತ್ತಿರುವಾಗ ಚಿರತೆಯೊಂದು ತನ್ನ ಕಡೆ ವೇಗವಾಗಿ ಬರುತ್ತಿರುವುದನ್ನು ಕಂಡಿತು. ನಾಯಿಗೆ ತಾನು ದೊಡ್ಡ ಅಪಾಯಕ್ಕೆ ಸಿಕ್ಕಿರುವುದು ಅರಿವಾಯಿತು. ಚಿರತೆಗೆ ಇವತ್ತಿನ ಲಂಚ್ ನಾನೇ. ಇದರ ಕೈಯಿಂದ ತಪ್ಪಿಸಿಕೊಳ್ಳುವುದು ಹೇಗೆ ಎಂದು ಅದು ಯೋಚಿಸಿತು.
ನಾಯಿ ಅಲ್ಲಿಯೇ ಬಿದ್ದಿದ್ದ ಎಲುಬಿನ ರಾಶಿ ನೋಡಿತು. ತಕ್ಷಣ ಅದಕ್ಕೊಂದು ಉಪಾಯ ಹೊಳೆಯಿತು. ಕೂಡಲೇ ಚಿರತೆಯ ಕಡೆಗೆ ಬೆನ್ನು ಮಾಡಿ ಕುಳಿತುಕೊಂಡು ಒಂದು ಎಲುಬಿನ ಚೂರನ್ನು ಜಗಿಯಲಾರಂಭಿಸಿತು. ಚಿರತೆ ಹತ್ತಿರಕ್ಕೆ ಬಂದು ನಾಯಿಯ ಮೇಲೆ ಹಾಯಲು ತಯಾರಾದಾಗ, ನಾಯಿ ಗಟ್ಟಿ ಧ್ವನಿಯಲ್ಲಿ, ಆಹಾ! ಎಂಥಾ ರುಚಿ ಈ ಚಿರತೆಯ ಮಾಂಸ. ಈ ಕಾಡಿನಲ್ಲಿ ಇನ್ನೂ ಚಿರತೆಗಳಿವೆಯಾ ಎಂದು ನೋಡಬೇಕು ಎಂದು ತನಗೆಇದನ್ನು ಕೇಳಿಕೊಂಡ ಚಿರತೆ ಹೆದರಿ ಕಂಗಾಲಾಗಿ, ಬದುಕಿದೆಯಾ, ಬಡ ಜೀವವೇ ಎಂದು ಕಾಡಿನೊಳಗೆ ಓಡಿ ಹೋಯಿತು. ಆ ನಾಯಿ ಇನ್ನೇನು ನನ್ನನ್ನು ತಿಂದೇ ಬಿಡುತ್ತಿತ್ತು. ಕೂದಲೆಳೆಯಲ್ಲಿ ತಪ್ಪಿಸಿಕೊಂಡೆ ಎಂದು ಅದು ನೆಮ್ಮದಿಯ ಉಸಿರೆಳೆಯಿತು. ಇದನ್ನೆಲ್ಲ ಒಂದು ಕೋತಿ ಮರದ ಮೇಲೆ ಕುಳಿತುಕೊಂಡು ನೋಡುತ್ತಿತ್ತು. ಈ ನಾಯಿಯ ಉಪಾಯ ಬಳಸಿಕೊಂಡು ಚಿರತೆಯಿಂದ ನಾನು ರಕ್ಷಣೆ ಪಡೆಯಬಹುದು ಎಂದು ಯೋಚಿಸಿ ಚಿರತೆಯನ್ನು ಹುಡುಕಿಕೊಂಡು ವೇಗವಾಗಿ ಕಾಡಿನೊಳಗೆ ಹೋಯಿತು. ಕೋತಿ ವೇಗವಾಗಿ ಹೋಗುವುದನ್ನು ನೋಡಿ ನಾಯಿಗೆ ಸಂಶಯ ಬಂತು. ಚಿರತೆಯನ್ನು ಕಂಡು ಕೋತಿ ನಡೆದದ್ದೆಲ್ಲವನ್ನೂ ಹೇಳಿತು. ಚಿರತೆಗೆ ಕೋಪ ನೆತ್ತಿಗೇರಿತು. ಕೇವಲ ಒಂದು ನಾಯಿ ನನ್ನನ್ನು ಮುಟ್ಠಾಳನನ್ನಾಗಿಸಿತು ಎಂದು ಅವಮಾನದಲ್ಲಿ ಅದರ ರಕ್ತ ಕುದಿಯಿತು. ಅದು ಕೋತಿಗೆ, ಗೆಳೆಯ ನನ್ನ ಬೆನ್ನ ಮೇಲೆ ಕುಳಿತುಕೋ. ಈಗ ನೋಡು, ಏನಾಗುತ್ತೆಯೆಂದು ಎಂದು ಸವಾಲು ಹಾಕಿತು.
ಕೋತಿಯೊಂದಿಗೆ ಬರುತ್ತಿರುವ ಚಿರತೆಯನ್ನು ಕಂಡು ನಾಯಿ, ಈಗೇನು ಮಾಡುವುದು? ಎಂದು ಯೋಚಿಸಿತು. ಓಡಿ ಹೋಗುವುದರಿಂದ ಪ್ರಯೋಜನವಿಲ್ಲ. ಉಪಾಯದಿಂದಲೇ ಪಾರಾಗಬೇಕು ಎಂದು ಯೋಚಿಸಿ ಚಿರತೆಯನ್ನು ಗಮನಿಸದಂತೆ ಅವುಗಳ ಕಡೆಗೆ ಬೆನ್ನು ಮಾಡಿ ಕುಳಿತುಕೊಂಡಿತು.
ಎಲ್ಲಿ ಹೋಯಿತು ಈ ಕೋತಿ? ಇನ್ನೊಂದು ಚಿರತೆಯನ್ನು ಹಿಡಿದು ತರುವುದಾಗಿ ಹೇಳಿ ಹೋದದ್ದು ಗಂಟೆ ಒಂದಾದರೂ ಬರಲಿಲ್ಲವಲ್ಲ ಎಂದು ಗಟ್ಟಿ ಧ್ವನಿಯಲ್ಲಿ ಹೇಳಿಕೊಂಡಿತು. ಚಿರತೆ ಮತ್ತು ಕೋತಿ, ಬಂದ ದಾರಿಗೆ ಸುಂಕವಿಲ್ಲ ಎಂದು ಓಡಿ ಹೋದವು.

**ನಿತಿನ್** 9E

# A Wise Counting

Emperor Akbar was in the habit of putting riddles and puzzles to his courtiers. He often asked questions which were strange and witty. It took much wisdom to answer these questions.
Once he asked a very strange question. The courtiers were dumb folded by his question.
Akbar glanced at his courtiers. As he looked, one by one the heads began to hang low in search of an answer. It was at this moment that Birbal entered the courtyard. Birbal who knew the nature of the emperor quickly grasped the situation and asked, "May I know the question so that I can try for an answer".
Akbar said, "How many crows are there in this city?"
Without even a moment's thought, Birbal replied "There are fifty thousand five hundred and eighty nine crows, my lord".
"How can you be so sure?" asked Akbar.
Birbal said, "Make you men count, My lord. If you find more crows it means some have come to visit their relatives here. If you find less number of crows it means some have gone to visit their relatives elsewhere".
Akbar was pleased very much by Birbal's wit.

MORAL : A witty answer will serve its purpose.

# A Farmer and His Wife

*A farmer said to his wife, "you are lazy. You work slowly and lethargically. You waste your time."*

*The wife was angry at the words of her husband.*

*She asid to her husband, "You are wrong. Stay at home tomorrow. I will go to field. I will do your work there. Will you do my works at home here?"*

*The farmer said happily, "Very well. I will do your works back at home."*

*The wife said, "Milk the cow. Feed the pigs. Waste the utensils. Take care of our hen. Spin the yarn."*

*The woman went to the field. The farmer stayed back at home. He took a vessel and went to the cow to milk it. He tried to milk the cow. He received a good kick. He then went to the pig-sty. He hit his head against the beam. He went to feed the hen. He forgot to spin.*

*The wife returned from the field when it turned evening. The farmer hung down his head in shame. Thereafter he did not find fault with his wife. They lived happily together for a long time.*

# Square Root of

## Negative One

Look at everyone
everyone has a mark on their face
invisible to the eye a
hiding all their secrets
It's all smiles , it's all laughter
It' s all handshakes and goodbyes
Affectation they are clothed in
and in which they die
Why do we hide behind a veil
a farce and a fake reality
while we are surreptitiously
darker in actuality
Break these glass walls
of pretty and colourful speech
wash away all that aesthetic debauchery
Break open,be you
Be kind and be true
Because your organs will wither
and you will die
So coexist and make the most of
this temporary life

*Prithvi Raj IX E*

# ದೇವರು ಕೊಟ್ಟ ಜಗತ್ತು

ಈ ಜಗತ್ತು ಎಂಬರದು ದೇವರು ಸೃಷ್ಟಿಸಿದ್ದು.ಅದರಲ್ಲಿ ಬದುಕಲು ಎಲ್ಲಾ ಜೀವ ಜಾಲಗಳಿಗೂ ಹಕ್ಕಿದೆ. ಆದರೆ ಮನುಶ್ಯನು ಈ ನಿಸರ್ಗದಲ್ಲಿ ಬದುಕುವ ಹಕ್ಕು ತನ್ನೊಬ್ಬನದ್ದೇ ಎಂಬ ದುರಾಸೆ,ಸ್ವಾರ್ಥ,ಅಹಂಕಾರ ಇದರಿಂದ ಪ್ರಕೃತಿಯಲ್ಲಿ ಅನೇಕಾನೇಕ ಜೀವಿಗಳ ಮಾರಣಾ ಹೋಮ ಆರಂಬವಾಗುತ್ತದೆ.ಇದು ನಿಜವಾಗಿಯೂ ಮನುಷ್ಯ ಮಾಡುವುದು ತಪ್ಪು.ಯಾಕೆ ನವು ನಮ್ಮ ಸ್ವಾರ್ಥಕ್ಕಾಗಿ ಇನ್ನೊಂದು ಜೀವಿಗಳನ್ನು ಕೊಲ್ಲಬೇಕು.ಅವುಗಳಿಗೂ ನಮ್ಮ ಹಾಗೆ ಈ ಭೂಮಿಯಲ್ಲಿ ಜೀವಿಸಲು ಹಕ್ಕಿದೆ.ಈ ಜಗತ್ತಿನ ಎಲ್ಲಾ ನಾಶಕ್ಕೆ ಕಾರಣವಾದದ್ದು ಮನುಷ್ಯರೇ.ಜೀವಿಗಳು ತನ್ನದೇ ಆದ ಬಾಳಿನಲ್ಲಿ ಜೀವಿಸುತ್ತದೆ.ಅದರ ಎಡೆ ನಾವು ಯಾಕೆ ಕೈ ಹಾಕುವುದು. ಜೀವಿಗಳು ಯಾರಿಗೂ ತೊಂದರೆಯನ್ನು ಕೊಡುವುದಿಲ್ಲ. ಹೆಚ್ಚಿನಲ್ಲಿಯೂ ಜೀವಿಗಳು ಪ್ರಕೃತಿಗೆ ಉಪಕಾರವನ್ನೇ ನೀಡಿದ್ದು.ಪಕ್ಷಿಗಳು,ಮೃಗಾದಿಗಳು ಅದರದ್ದೇ ಆದ ಗೂಡುಗಳಲ್ಲಿ ಚಿಲಿಪಿಲಿಗುಟ್ಟಿ ಜೀವಿಸುತ್ತದೆ. ಪಕ್ಷಿಗಳು ಪ್ರಕೃತಿಗೆ ಒಂದು ಸೌಂದರ್ಯ.ಮೃಗಾದಿಗಳು ಕಾಡಿನಲ್ಲಿ ಒಳ್ಳೆಯ ರೀತಿಯಲ್ಲಿ ಜೀವಿಸುತ್ತದೆ. ಯಾಕೆ ನಾವು ಕಾಡುಗಳನ್ನು ಕಡ್ದು ಅವುಗಲಿಗೆ ಉಪದ್ರವನ್ನು ಕೊಡಬೇಕು ? ನಾವು ಯಾವ ಜೀವಜಾಲಗಳಿಗೂ ಉಪದ್ರವನ್ನು ಕೊಡಬಾರದು. ಒಳ್ಳೆಯ ಮನಸ್ಸು,ಕರುಣೆಯಿಂದ ಪರಸ್ಪರ ಸಹಾಯವನ್ನು ಮಾಡಿ ಒಳ್ಳೆಯ ರೀತಿಯಲ್ಲಿ ಎಲ್ಲರೂ ಜೀವಿಸಿದರೆ ಈ ಭೂಮಿಯನ್ನು ಒಂದು ಸ್ವರ್ಗವನ್ನಾಗಿ ಮಾಡಬಹುದು. ಹಾಗಾದರೆ ಪ್ರಾಣಿ ಪಕ್ಷಿಗಳು ಹೆದರಿಕೆಯಿಲ್ಲದೆ ಸಂತೋಷದಿದ ಜೀವಿಸಲು ಸಾಧ್ಯ. ಯಾರು ಯಾರಿಗೂ ಉಪದ್ರವನ್ನು ಕೊಡದಿದ್ದರೆ ಯಾರನ್ನು ನಾವು ಹೆದರಬೇಕು ?.ಆದ್ದರಿಂದ ಈ ಭೂಮಿಯಲ್ಲಿ ಮನುಷ್ಯನ ಹಾಗೆಯೇ ಎಲ್ಲಾ ಜೀವಜಾಲಗಳಿಗೂ ಬದುಕುವ ಹಕ್ಕಿದೆ. ಆದ್ದರಿಂದ ಎಲ್ಲಾ ಜೀವಿಗಳಿಗೂ ಬದುಕುವ  ಅವಕಾಶವನ್ನು ಕೊಟ್ಟು ಕರುಣೆಯಿಂದ ಒಳ್ಳೆಯ ರೀತಿಯಲ್ಲಿ ಜೀವಿಸೋಣ .

“ನಾವು ಬದುಕೋಣ ಜೀವ ಜಾಲಗಳನ್ನು ಬದುಕಿಸೋಣ‘.   *ಹೈದರ್ ಅಲಿ ೯ಬಿ*

# The Postman

The postman is Government servant. Social worker also Because he is very useful to the society.



He wears Khaki uniform. One can easily recognise him with his Khaki dress and a Khaki bag on his shoulder

Every brings letters of all kinds moneyorders, registers, parcels, VPP and so on.

He brings good news to all. Sometimes he brings bad news also.

Every one waits for him daily for the news. In this way serves the society and the nation

*Prithvi raj IXE*

SDPHSD

# ನುಡಿಮುತ್ತುಗಳು

*ಅಹಂಕಾರವೇ ಅರಿವಿನ*
*ಶತ್ರು ಸ್ನೇಹಿತರಲ್ಲ*

*ಬಡವನಾಗಿ ಜನಿಸು*
*ಶ್ರೀಮಂತನಾಗಿ ಬಾಳು*

*ಅರಿವೇ ಶ್ರೀಮಂತಿಕೆ*
*ಅಜ್ಞಾನವೇ ಬಡತನ*

***only look back to see***
***how far you've come***

***a bad boy with a***
***good heart,i think***
***that would perfect***
***for me***

***mushraf 9B***

SDPHSD

# ಕಾಸರಗೋಡು

ನೂರಾರು ಬಣ್ಣಗಳು ಒಂದುಗೂಡಲಿ

ನೂರಾರು ಬಾಷೆಗಳು ಕಾಸರಗೋಡಲಿ

ನೂರಾರು ಕಲೆಗಳು ನಮ್ಮ ಊರಲಿ

ನಾವೆಲ್ಲ ಒಂದುಗೂಡಿ ಇಲ್ಲಿ ಬಾಳಲಿ

ಮೂರು ಮೂರು ಆರು

ಆರು ಒಂದು ಏಳು

ಏಳು ಭಾಷಾ ಸಂಗಮ ಭೂಮಿ

ನಮ್ಮ ಕಾಸರಗೋಡು

ಕನ್ನಡದ ಧ್ವನಿ ಮಲಯಾಳದ

ಹೋರಾಟ

ಕನ್ನಡ ಭಾಷೆ ಉಳಿಯಲಿ

ಎಂದು ನಾವು ಆಶಿಸುವ.

ಜೆಲೆಸ್ಪಿರೋಯಿ **9B**

# TWICE A WEEK THE WINTER THROUGH

*Twice a week the winter through*
*Here stood I to keep the goal;*
*Football then was fighting sorrow*
*For the young man's soul.*

*Now in Maytime to the wicket*
*Out I march with bat and pad;*
*See the son of grief at Cricket*
*Trying to be glad.*

*Try I will;no harm in trying;*
*Wonder tis how little mirth*
*Keeps the bones of man from lying*
*On the bed of earth._*

**Kripesh.M 9A**

# ಉಪಕಾರ

ವಿಶಾಲ್ ಶಾಲೆಯಿಂದ ಮನೆಗೆ ಬರುತ್ತಿರುವಾಗ ರಸ್ತೆಯಲ್ಲಿ
ನಾಯಿಯೊಂದು ಕಾಲಿಗೆ
ಗಾಯವಾಗಿ ನಡೆಯಲಾಗದೆ ನೋವಿನಿಂದ ಅಲ್ಲೇ ಬಿದ್ದಿತ್ತು.ಇದನ್ನು ಕಂಡ
ವಿಶಾಲ್
ಮನೆಯಿಂದ ಔಷಧ ತಂದು ಬ್ಯಾಂಡೇಜ್ ಕಟ್ಟಿದನು.
ಒಮ್ಮೆ ವಿಶಾಲ್ನನ್ನು ಮಕ್ಕಳು ಹಿಡಿಯಲು ಬಂದಾಗ ಕಳ್ಳರನ್ನು ಕಚ್ಚಿ
ಓಡಿಸಿತು.ಹೀಗೆ
ಅದು ಪ್ರತ್ಯುಪಕಾರ ಮಾಡಿತು.

ಜೆಲೆಸ್ಟಿ ರೋಯಿ **9B**

SDPHSD

# ಗೆಳೆಯರು

ಗೆಳೆಯರನ್ನು ಸಂಪಾದಿಸು

ಆಪತ್ಕಾಲದಲ್ಲಿ ಕೈ ಹಿಡಿಯುತ್ತಾರೆ

ಗೆಳೆಯರನ್ನು ಪ್ರಿತಿಸು

ಸೋತಾಗ ಸಮಾಧಾನ  ಹೇಳುತ್ತಾರೆ

ಗೆಳೆಯರನ್ನು ಸಂಘಟಿಸು

ನಿನ್ನ ಗೆಲುವಿನ ಮೆಟಿಲು ಆಗುತ್ತಾರೆ

*Amrutha IX E*

# Cat and Dog were Friends

*Georgie Porgie was a cheeky little boy. He liked to tease people especially little girls.*

*One afternoon, he went to the park near his house. He found a little girl and tried to kiss her. The girl cried and sobbed because she did not like Georgie.*

*Then, some boys came to the park and saw Georgie chasing after the girl. They shouted and laughed loudly at Georgie. Georgie stopped chasing the girl and ran away feeling embarrassed. Thereafter Georgie hesitated to play with his friends because he remembered his embarrassment that he faced in front of his friends. This incident prohibited him from chasing girls thereafter.*

SDPHSD

# Baa Baa Black Sheep

*There was an old owl that lived in an oak. Everyday he saw incidents happening around him. Yesterday he saw a boy helping an old man to carry a heavy basket. Today he saw a girl shouting at her mother. The more he saw the less he spoke.*

*As he spoke less, he heard more. He heard people talking and telling stories. He heard a woman saying that an elephant jumped over a fence. He also heard a man saying that he had never made a mistake.*

*The old owl had seen and heard about what happened to people. Some became better and some became worse. But the old owl had become wiser each and every day.*

# A Wise Old Owl

*There was an old owl that lived in an oak. Everyday he saw incidents happening around him. Yesterday he saw a boy helping an old man to carry a heavy basket. Today he saw a girl shouting at her mother. The more he saw the less he spoke.*

*As he spoke less, he heard more. He heard people talking and telling stories. He heard a woman saying that an elephant jumped over a fence. He also heard a man saying that he had never made a mistake.*

*The old owl had seen and heard about what happened to people. Some became better and some became worse. But the old owl had become wiser each and every day.*

SDPHSD

# ತೊಟ್ಟಿಲು

*ಎದ್ದು ಬೀಳೋ ಈ ಬಾಳ ಬಂಡಿಯಲಿ*
*ಬಹು ಎಣಿಕೆಯ ಪಯಣಿಗರು*
*ಮುಳ್ಳು ಹಾದಿಯಲಿ ನೋವನುಂಗಿ*
*ನಗುವರಸಿ ಇಣುಕುವರು ಕಿಂಡಿಯಲಿ*

*ನಗುವಿಲ್ಲ, ನಲಿವಿಲ್ಲ ನಾನೋಡೋ ದೃಷ್ಟಿಯಲಿ*
*ಬರಿಕತ್ತಲು ತುಂಬಿರಲು ಈ ಇಳೆಯ ಸೃಷ್ಟಿಯಲಿ*
*ದಿನಬೆಳಗಾಗಲು ಕತ್ತಲು ಬಹು ದೂರ*
*ಜಗದೊಳಗೆ ಸಂಕಟವೆಂಬುದು ಬಲುಭಾರ*

*ಬರುವವು ಕಾಣಲು ಎಮ್ಮನು*
*ದಿನವೂ ಹಗಲೂ ಇರುಳೂ*
*ಅಲೆಗಳ ತುಂಬಿರುವ ಕಡಲ*
*ಕಾಯುವ ಮರುಳು*

*ಈ ಜೀವನದ ಹಾದಿಯಲಿ*
*ಹಿಂದು ಮುಂದು ಸಾಗುವ ತೊಟ್ಟಿಲಂತೆ*
*ಏರಿದಷ್ಟು ತೀರದ*
*ಉತ್ತುಂಗದ ಮೆಟ್ಟಲಂತೆ*

**Deekshitha 9E**

SDPHSD

# ಎತ್ತಿನ ಗಾಡೀ

ಎಳೆಯುತ ಗಾಡೀ ಎತ್ತಿನ ! ಎತ್ತಿನ ಜೋಡಿ
ದಡ ಬಡ ಸದ್ದಿನ ನಮ್ಮಾಗ್ಡಿ

ಕೊರಳಿಗೆ ಗಂಟೆ ! ಕಂಚಿನ ಗಂಟೆ
ಘಣ ! ಘಣ ! ಗಂಟೆ

ಝಣ ! ಝಣ ! ಝಣ ! ಗಂಟೆ

ಕೊಂಬಿನ ಕಳಸಕೆ ಕಟ್ಟಿದ ಗೆಜ್ಜೆ
ಕಡಾಣಿ ಕಂಬಿಗೆ ಹಾಕಿದ ಗೆಜ್ಜೆ

ಝಣ ! ಝಣ ! ಝಣ ! ಗೆಜ್ಜೆ

ತಾಳಕೆ ಇಡುತಿಹ ಎತ್ತಿನ ಹೆಜ್ಜೆ
ಘಲು ! ಘಲು ! ಘಲು ! ಗೆಜ್ಜೆ

ಘಲು ! ಘಲು ! ಘಲು ! ಗೆಜ್ಜೆ

ಗಾಲಿಯು ಉರುಳುವ ಕಟಕಟ ಸದ್ದು
ಗಾಡಿಯು ಓಡುವ ದಡ ಬಡ ಸದ್ದು

ದಡ ! ಬಡ ! ದಡ ! ಸದ್ದು

SDPHSD

# ಗಾಳಿಪಟ

ಅಣ್ಣನು ಮಾಡಿದ ಗಾಳಿಪಟ
ಬಣ್ಣದ ಹಾಳೆಯ ಗಾಳಿಪಟ

ನೀಲಿಯ ಬಾನಲಿ ತೇಲುವ ಸುಂದರ
ಬಾಲಂಗೋಸಿಯ ನನ್ನ ಪಟ

ಬಿದಿರಿನ ಕಡ್ಡಿಯ ಗಾಳಿಪಟ
ಬೆದರದ ಬೆಚ್ಚದ ಗಾಳಿಪಟ

ದಾರವ ಜಗ್ಗಿ
ದೂರದ ನಗಿಸುವ ನನ್ನ ಪಟ

SDPHSD

# ಪುಟ್ಟ ಮರಿ ಜಾಣ ಮರಿ

## ಎಲ್ಲಿ ಓಡುವೆ?

ಪುಟ್ಟ ಕಣ್ಣು ಅರಳಿಸಿ
ನೀನೇನು ನೋಡುವೆ
ಮುದ್ದು ಕಿವಿ ನಿಮಿರಿಸಿ
ನೀನೇನು ಕೇಳುವೆ

ಅಲ್ಲಿ ಇಲ್ಲಿ ನೋಡಿ
ಚಂಗನೆದ್ದು ಜಿಗಿಯುವೆ
ನನ್ನ ಕೈಗೆ ಸಿಗದೆ
ಏಕೆ ಹೀಗೆ ಕಾಡುವೆ

ಮುದ್ದು ಮರಿ ಮೇಕೆ ಮರಿ
ಎಲ್ಲಿ ನೀನು ಓಡುವೆ
ನನ್ನ ಜೊತೆಗೆ ಆಡು ನೀನು
ನಿನ್ನ ಮುದ್ದು ಮಾಡುವೆ

# ಬುಗುರಿ



ನನ್ನಯ ಬುಗುರಿ
ಬಣ್ಣದ ಬುಗುರಿ
'ಗುರು ಗುರು' ಸದ್ದನು ಮಾಡುವ
ಬುಗುರಿ

ಜಾಳಿಗೆ ಸುತ್ತಿ ಕೈಯನು ಎತ್ತಿ
ಬೀಸಲು ಭರದಿ ಸುತ್ತುವ ಬುಗುರಿ

ಹೊಡೆತಕೆ ಅಂಜದೆ ಕೆಚ್ಚೆದೆಯಿಂದಲಿ
'ಗಿರಿ ಗಿರಿ' ತಿರುಗುವ ಮೆಚ್ಚಿನ ಬುಗುರಿ

ಅಂಗೈ ಮೇಲೆ ಆಡುವ ಬುಗುರಿ
ಕಚಗುಳಿಯಿಕ್ಕುವ ಮೋಜಿನ ಬುಗುರಿ

ಕಾಮನ ಬಿಲ್ಲನು ಭೂಮಿಗೆ ಇಳಿಸಿ
'ಗರ ಗರ' ಸುತ್ತುವ ಬಣ್ಣದ ಬುಗುರಿ

SDPHSD

# ಹುಲಿಯಣ್ಣ



ಹುಲಿಯಣ್ಣ ಹುಲ್ಲಿಯಣ್ಣ ಕಾಡಿಗೆ ಹಿರಿಯಣ್ಣ
ಅದರೂ ನೀನು ಕಾಡಲ್ಲೇ ಇರು ಊರಿನೊಳಗೆ ಬರ ಬೇಡಣ್ಣ

ಹುಲಿಯಣ್ಣ ಹುಲ್ಲಿಯಣ್ಣ ಎಂತ ಮೀಸೆ ನಿನಗಣ್ಣ
ಎಂತ ಬಾಯಿ, ಎಂತ ಹಲ್ಲು, ಎಂತ ಗರ್ಜನೆ ನಿನದಣ್ಣ

ಹುಲಿಯಣ್ಣ ಹುಲ್ಲಿಯಣ್ಣ ಪಳ ಪಳ ಗಾಜಿನ ಕಣ್ಣಣ್ಣ
ಚೂರಿಗಿಂತ ಚೂಪು ಹುಗುರು ಬಣ್ಣದ ಗೆರೆಯ ಮೈಯಣ್ಣ

ಹುಲಿಯಣ್ಣ ಹುಲ್ಲಿಯಣ್ಣ ಹತ್ತಿರ ನೀ ಬರ ಬೇಡಣ್ಣ
ಹತ್ತಿರ ಬಂದರೆ ನಾಲಿಗೆ ಒಣಗಿ ಚಡ್ಡಿವದ್ದೆ ತಿಳಿಯಣ್ಣ

SDPHSD

# ಬಸವಣ್ಣನವರ ವಚನಗಳು

ನಾನೊಂದ ನೆನೆದರೆ, ತಾನೊಂದ ನೆನೆವುದು;

ನಾನಿತ್ತಲೆಳೆದರೆ, ತಾನತ್ತಲೆಳೆವುದು;

ತಾ ಬೇರೆ ಎನ್ನನಳಲಿಸಿ ಕಾಡಿತ್ತು;

ತಾ ಬೇರೆ ಎನ್ನ ಬಳಲಿಸಿ ಕಾಡಿತ್ತು;

ಕೂಡಲಸಂಗನ ಕೂಡಿಹೆನೆಂದರೆ

ತಾನೆನ್ನ ಮುಂದುಗೆಡಿಸಿತ್ತು ಮಾಯೆ.

ತುಪ್ಪದ ಸವಿಗೆ ಅಲಗ ನೆಕ್ಕುವ

ಸೊಣಗನಂತೆನ್ನ ಬಾಳುವೆ

ಸಂಸಾರಸಂಗವ ಬಿಡದು ನೋಡೆನ್ನ ಮನವು.

ಈ ನಾಯಿತನವ ಮಾಣಿಸು

ಕೂಡಲಸಂಗಮದೇವಯ್ಯ ನಿಮ್ಮ ಧರ್ಮ.

# Ramanujan Number

Two ways to say that 1729 is the sum of two cubes.
1x1x1=1; 12x12x12=1728. So 1+1728=1729 But also:
9x9x9=729; 10x10x10=1000. So 729+1000=1729

1729- The smallest number that can be expressed by the sum of two cubes in two different ways.

$10^3 + 9^3 = 1729$

$12^3 + 1^3 = 1729$

# ಆರೋಗ್ಯ ಮತ್ತು ಶುಚಿತ್ವದ ಕಾರ್ಯಾಗಾರ

ಶ್ರೀ ದುರ್ಗಾ ಪರಮೇಶ್ವರೀ  ಹೈಯರ್ ಸೆಕೆಂಡರಿ ಶಾಲೆ ಧರ್ಮತ್ತಡ್ಕದಲ್ಲಿ ವಿದ್ಯಾರ್ಥಿಗಳಿಗೆ ವೈಯಕ್ತಿಕ ಆರೋಗ್ಯ ಮತ್ತು ಶುಚಿತ್ವದ ಬಗ್ಗೆ ಮಾಹಿತಿ ಕಾರ್ಯಾಗಾರ ಕಾರ್ಯಕ್ರಮವು ಶಾಲೆಯಲ್ಲಿ ಜರಗಿತು. ನಿವೃತ್ತ ಅಧ್ಯಾಪಕಿ ಶ್ರೀಮತಿ ಸತ್ಯವತಿ ಗೂತ್ತಿನಬೈಲು ಕಾರ್ಯಾಗಾರವನ್ನು ನಡೆಸಿಕೊಟ್ಟರು. ವಿದ್ಯಾರ್ಥಿಗಳಿಗೆ ಈ ಕುರಿತು ಹೆಚ್ಚಿನ ಮಾಹಿತಿಯನ್ನು ಅಧ್ಯಾಪಕರಾದ ಶ್ರೀಯುತ ರಾಮಕೃಷ್ಣ ಭಟ್, ಗೋವಿಂಧ ಭಟ್, ಪ್ರದೀಪ್ ಮತ್ತು ಶಿವನಾರಾಯಣ ಭಟ್ ನೀಡಿದರು. ಶ್ರೀಮತಿ ಉಷಾ ಕೆ ಆರ್, ಸುನೀತಾ ಕೆ ಮತ್ತು ವಿಚೇತ ಉಪಸ್ಥಿತರಿದ್ದರು.



# ವಿಶ್ವ ಪರಿಸರ ದಿನಾಚರಣೆ

ಶ್ರೀ ದುರ್ಗಾಪರಮೇಶ್ವರೀ  ಹೈಯರ್ ಸೆಕೆಂಡರಿ ಶಾಲೆ ಧರ್ಮತ್ತಡ್ಕದಲ್ಲಿ ವಿಶ್ವ ಪರಿಸರ ದಿನಾಚರಣೆಯನ್ನು ಶಾಲಾ ವಿದ್ಯಾರ್ಥಿಗಳಿಗೆ ಗಿಡಗಳ ವಿತರಣೆಯೊಂದಿಗೆ ಆಚರಿಸಲಾಯಿತು. ಶಾಲಾ ಪರಿಸರದಲ್ಲಿ ಜೈವ ವೈವಿಧ್ಯ ಉದ್ಯಾನವನವನ್ನು ಇನ್ನಷ್ಟು ಬೆಳೆಸಲು ಔಷಾಧೀಯ ಗುಣವುಳ್ಳ ಗಿಡಗಳನ್ನು ಶಾಲಾ ವ್ಯವಸ್ಥಾಪಕರಾದ ಶ್ರೀ ಯನ್ ಶಂಕರನಾರಾಯಣ ಭಟ್ ರವರು ನೆಡುವುದರೊಂದಿಗೆ, ಪರಿಸರ ಸಂರಕ್ಷಣೆ ಮಹತ್ತ್ವವನ್ನು ಶಾಲಾ ಪ್ರಾಂಶುಪಾಲರಾದ ಶ್ರೀ ಯನ್ ರಾಮಚಂದ್ರ ಭಟ್ ಇವರು ವಿಧ್ಯಾರ್ಥಿಗಳಿಗೆ ತಿಳಿಸಿದರು. ಶಾಲಾ ಶಿಕ್ಷಕರು ಮತ್ತು ಶಿಕ್ಷಕೇತರ ವರ್ಗದವರು ಕಾರ್ಯಕ್ರಮದಲ್ಲಿಪಾಲ್ಗೊಂಡರು. ಶಾಲಾ ಹಿಂದಿ ಮತ್ತು ಕನ್ನಡ ಸಂಘ ವತಿಯಿಂದ ಪರಿಸರ ಮಹತ್ವವನ್ನು ಸಾರುವ ಘೋಷಣಾ ವಾಕ್ಯಗಳನ್ನು ಪ್ರದರ್ಶಿಸಲಾಯಿತು.



# ವಿವಿಧ ಕ್ಲಬ್ ಗಳ ಉದ್ಘಾಟನೆ

ಶ್ರೀ ದುರ್ಗಾ ಪರಮೇಶ್ವರೀ  ಹೈಯರ್ ಸೆಕೆಂಡರಿ ಶಾಲೆ  ಧರ್ಮತ್ತಡ್ಕದಲ್ಲಿ ನೂತನ ಶೈಕ್ಷಣಿಕ ವರ್ಷದ ವಿವಿಧ ಕ್ಲಬ್ ಗಳ ಉದ್ಘಾಟನೆಯನ್ನು ಶಾಲಾ ಪ್ರಾಂಶುಪಾಲರಾದ ಶ್ರೀ ಯನ್ ರಾಮಚಂದ್ರ ಭಟ್ ವಿಜ್ಞಾನ ಪ್ರಯೋಗದ ಮೂಲಕ ಉದ್ಘಾಟಿಸಿದರು. ಶಿಕ್ಷಕರಾದ ಶ್ರೀ ಕೆ ನರಸಿಂಹ ಭಟ್, ಶ್ರೀ ಗೋವಿಂಧ ಭಟ್, ಶ್ರೀ ಅಶೋಕ್ ಕುಮಾರ್ ಟಿ ಶುಭ ಹಾರೈಸಿದರು. ವಿವಿಧ ಕ್ಲಬ್ ಗಳ ಪದಾಧಿಕಾರಿಗಳನ್ನೂ ಕ್ಲಬ್ ನ ಸದಸ್ಯರಿಂದ ಆರಿಸಲಾಯಿತು. ವಿದ್ಯಾರ್ಥಿಗಳಾದ ಸ್ವರ್ಣ ಕೆ ಸ್ವಾಗತಿಸಿ, ವಿಜ್ಞೇಶ ವಂದಿಸಿದರು. ಧನ್ಯಶ್ರೀ ನಿರೂಪಿಸಿದರು.



# ಮುಸ್ಸಂಜೆ

ಬಾನಿಂದಿಳಿದನು

ಬೆಳಗಿನ ಸೂರ್ಯನು
ಸಂಜೆಯ ಸಮಯದಲಿ
ಆಡುವ ಮಕ್ಕಳ
ಬಳಗವು ಸಾಗಿತು
ಮನೆಕಡೆ ನಲಿಯುತಲಿ
ಚಿಲಿಪಿಲಿ ಗುಟ್ಟುತ
ಹಕ್ಕಿಯ ಬಳಗವು
ಸಾಗಿತು ಬಾನಿನಲಿ
ನಗೆಯನು ಬೀರುತ
ಚಂದಿರ ಬಂದನು
ಬಾನಿನ ಅಂಗಳದಿ

**ರಚನೆ : 8 ನೇ ತರಗತಿಯ ಮಕ್ಕಳು**

# ಯೋಗ ದಿನಾಚರಣೆ

ಶ್ರೀ ದುರ್ಗಾ ಪರಮೇಶ್ವರೀ ಹೈಯರ್ ಸೆಕೆಂಡರಿ ಶಾಲೆ ಧರ್ಮತ್ತಡ್ಕದಲ್ಲಿ ಯೋಗ ದಿನವನ್ನು ವಿಜಯ ಕರ್ನಾಟಕ ದಿನಪತ್ರಿಕೆಯ ವರದಿಗಾರರಾದ ಶ್ರೀಯುತ ಜಗದೀಶ್ ಪ್ರತಾಪ್ ನಗರ್ ಇವರ ಉಪಸ್ಥಿತಿಯಲ್ಲಿ ಜರಗಿತು. ಶಾಲಾಪ್ರಾಂಶುಪಾಲರಾದ ಶ್ರೀ ಯನ್ ರಾಮಚಂದ್ರ ಭಟ್ ಕಾರ್ಯಕ್ರಮವನ್ನು ಉದ್ಘಾಟಿಸಿದರು. ಜಗದೀಶ್ ಪ್ರತಾಪ್ ನಗರ್ ಇವರು ವಿದ್ಯಾರ್ಥಿಗಳಿಗೆ ಯೋಗದ ಮಹತ್ವವನ್ನು ತಿಳಿಸಿದರಲ್ಲದೆ ಯೋಗದ ವಿವಿಧ ಆಸನಗಳನ್ನು ಪ್ರಾತ್ಯಕ್ಷಿಕೆಯ ಮೂಲಕ ತಿಳಿಸಿದರು. ಶಾಲಾ ಅಧ್ಯಾಪಕ ಶ್ರೀಯುತ ಗೋವಿಂದ ಭಟ್ ಸ್ವಾಗತಿಸಿ, ಶ್ರೀಮತಿ ಸುನೀತಾ ಕೆ ವಂದಿಸಿದರು. ಶ್ರೀಯುತ ಶಿವನಾರಾಯಣ ಭಟ್ ಇವರು ಕಾರ್ಯಕ್ರಮ ನಿರೂಪಿಸಿದರು.



SDPHSD

# ರಾಮಾಯಣ ಮಾಸಾಚರಣೆ

ರಾಮಾಯಣ ಮಾಸಾಚರಣೆ ಹಾಗೂ ಗುರುವಂದನೆ ಕುಂಬಳೆ: ಭಾರತೀಯ ಸನಾತನ ಪರಂಪರೆ ಗುರುಕುಲ ವಿದ್ಯಾಭ್ಯಾಸಕ್ಕೆ ಹೊಂದಿಕೊಂಡಿದೆ. ಆದರೆ ಇವತ್ತಿನ ಪ್ರಸ್ತುತತೆಯಲ್ಲಿ ಕೂಡಾ ಅದೇ ರೀತಿ ಸ್ಥಾನ ಮಾನ ಗುರುವಿಗೆ ನೀಡಬೇಕು ಎಂದು ಶಾಲಾ ಸಂಚಾಲಕಿ ಶಾರದಮ್ಮ ಹೇಳಿದರು. ಧರ್ಮತ್ತಡ್ಕ ಶ್ರೀ ದುರ್ಗಾ ಪರಮೇಶ್ವರೀ ಹೈಯರ್ ಸೆಕೆಂಡರಿ ಶಾಲೆಯಲ್ಲಿ ಸಂಸ್ಕೃತ ಸಂಘದ ಆಶ್ರಯಲ್ಲಿ ಎಲ್ಲ ಸಂಘಗಳ ಸಹಕಾರದೊಂದಿಗೆ ಇತ್ತೀಚೆಗೆ ನಡೆದ ರಾಮಾಯಣ ಮಾಸಾಚರಣೆ ಮತ್ತು ಗುರುವಂದನೆ ಕಾರ್ಯಕ್ರಮವನ್ನು ಉದ್ಘಾಟಿಸಿ ಅವರು ಮಾತನಾಡಿದರು. ಗುರು ಎಂದರೆ ಅಂಧಕಾರ ಹೋಗಲಾಡಿಸುವವ. ಬದುಕಿನಲ್ಲಿ ಗುರುನಿಷ್ಠೆ ಅಗತ್ಯ. ಗುರುವಿನ ಅನುಗ್ರಹವಿಲ್ಲದೆ ಮುಕ್ತಿ ದೊರೆಯಲಾರದೆಂಬ ಪರಿಕಲ್ಪನೆಯ ಹಿಂದೆ ಉದಾತ್ತ ಚಿಂತನೆ ಅಡಗಿದೆ. ಒಂದಕ್ಷರ ಕಲಿಸಿದಾತನೂ ಗುರು ಎನ್ನಲಾಗುತ್ತದೆ. ಗುರುಗಳಿಗೆ ವಂದನೆ ಸಲ್ಲಿಸುವುದು ಪ್ರಾಚೀನ ಸಂಸ್ಕೃತಿಯಲ್ಲೇ ರೂಢಿಯಲ್ಲಿತ್ತು. ಇಂದಿಗೂ ಗುರುವಿನ ಮಹತ್ತ್ವವನ್ನರಿತು ಗುರುವಂದನೆ ನಡೆಯುತ್ತಿದೆ. ಇಂತಹ ಕಾರ್ಯಕ್ರಮ ಅಗತ್ಯವಾಗಿ ನಮ್ಮ ದೇಶದ ಗುರುಸ್ಥಾನಕ್ಕೆ ಇರುವ ಮಹತ್ವ ಸಾಬೀತುಪಡಿಸುತ್ತದೆ. ಈ ನಿಟ್ಟಿನಲ್ಲಿ ಶಾಲೆಯಲ್ಲಿ ರಾಮಾಯಣ ಮಾಸಾಚರಣೆ ಹಾಗೂ ಗುರುವಂದನೆ ಸಕಾಲಿಕ ಎಂದು ಅವರು ತಿಳಿಸಿದರು. ಅಧ್ಯಕ್ಷತೆ ವಹಿಸಿದ್ದ ಶಾಲಾ ಪ್ರಬಂಧಕ ಶಂಕರನಾರಾಯಣ ಭಟ್ ಮಾತನಾಡಿ, ಶಾಲಾ ಜೀವನ ಬದುಕಿನ ಮಹತ್ತರ ಬೆಳವಣಿಗೆಗೆ ಮಾರ್ಗದರ್ಶಿಯಾಗಿದ್ದು, ಶಿಲ್ಪಿ ಕಲ್ಲು ಕೆತ್ತುವಂತೆ ಗುರು ಒಬ್ಬ ಉತ್ತಮ ಶಿಷ್ಯನ ಜೀವನ ಕೆತ್ತುತ್ತಾನೆ ಎಂದರು. ಸತ್ಯವತಿ, ಹಿರಿಯ ಪ್ರಾಥಮಿಕ ಸಂಸ್ಕೃತ ಅಧ್ಯಾಪಕ ಕೃಷ್ಣ ಪ್ರಸಾದ್ ಕಡೆಗೆದ್ದೆ ಮುಖ್ಯ ಅತಿಥಿಗಳಾಗಿ ಉಪಸ್ಥಿತರಿದ್ದು ಮಾತನಾಡಿದರು. ಪ್ರಭಾರ ಪ್ರಾಂಶುಪಾಲ ನರಸಿಂಹರಾಜ ಭಟ್, ಶಿವನಾರಾಯಣ ಭಟ್ ಮಾತನಾಡಿದರು. ಸಂಸ್ಕೃತ ಸಂಘದ ಕಾರ್ಯದರ್ಶಿ ಆದಿತ್ಯರಾಮ ಸ್ವಾಗತಿಸಿ, ಜೊತೆ ಕಾರ್ಯದರ್ಶಿ ಮೇಘ ವಂದಿಸಿದರು. ಸಾತ್ವಿಕ ಕೃಷ್ಣ ಕಾರ್ಯಕ್ರಮ ನಿರೂಪಿಸಿದರು. ವಿದ್ಯಾರ್ಥಿನಿಯರು ಪ್ರಾರ್ಥನೆ ಹಾಡಿದರು. ಎಲ್ಲ ಅಧ್ಯಾಪಕರು ಪುಷ್ಪಾರ್ಚನೆ ಮೂಲಕ ಗುರುವಂದನೆ ನಡೆಸಿದರು.



# ಕಾರ್ಗಿಲ್ ವಿಜಯೋತ್ಸವ ಆಚರಣೆ

ಧರ್ಮತ್ತಡ್ಕ : ಶ್ರೀ ದುರ್ಗಾಪರಮೇಶ್ವರಿ ಪ್ರೌಢ ಶಾಲೆಯಲ್ಲಿ ಸಮಾಜ ವಿಜ್ಞಾನ ಸಂಘದ ನೇತೃತ್ವದಲ್ಲಿ ಕಾರ್ಗಿಲ್ ವಿಜಯೋತ್ಸವ ದಿನವನ್ನು ಅರ್ಥಪೂರ್ಣವಾಗಿ ಆಚರಿಸಲಾಯಿತು. ದೀಪ ಪ್ರಜ್ವಲನೆಯ ಮೂಲಕ ಅಮರ ಯೋಧರ ಸ್ಮರಣೆ ಮಾಡುತ್ತಾ ಮೌನ ಪ್ರಾರ್ಥನೆಯೊಂದಿಗೆ ಶಾಲಾ ಮ್ಯಾನೇಜರ್ ಶಂಕರನಾರಾಯಣ ಭಟ್ ಕಾರ್ಯಕ್ರಮ ಉದ್ಘಾಟಿಸಿದರು. "ನಾವಿಂದು ಸುಖವಾಗಿ ನಮ್ಮ ಮನೆಗಳಲ್ಲಿ ನಿಶ್ಚಿಂತೆಯಿಂದ ನಿದ್ರಿಸುತ್ತಿದ್ರೆ ಅದು ನಮ್ಮ ಯೋಧರು ನಿದ್ದೆ ಗೆಟ್ಟು ತಮ್ಮ ಕರ್ತವ್ಯದಲ್ಲಿ ಮಗ್ನರಾದುದರಿಂದ, ಪ್ರತಿಯೊಬ್ಬ ಯೋಧನು ಕೂಡ ನಮ್ಮ ಹೆಮ್ಮೆ" ಎಂದು ಶಾಲಾ ಪ್ರಾಂಶುಪಾಲರಾದ ರಾಮಚಂದ್ರ ಭಟ್ ಅಭಿಪ್ರಾಯಪಟ್ಟರು.



SDPHSD

# ಜಲಪಾತ ವೀಕ್ಷಣೆ

ಧರ್ಮತ್ತಡ್ಕ ವಿದ್ಯಾಲಯದ ವಿದ್ಯಾರ್ಥಿಗಳಿಂದ ಜಲಪಾತ ವೀಕ್ಷಣೆ : ಶ್ರೀ ದುರ್ಗಾ ಪರಮೇಶ್ವರೀ ಹೈಯರ್ ಸೆಕೆಂಡರಿ ಶಾಲೆಯ ವಿದ್ಯಾರ್ಥಿಗಳು ಅಧ್ಯಾಪಕರೊಂದಿಗೆ ಕಂಪ ಜಲಪಾತವನ್ನು ವೀಕ್ಷಿಸಿದರು. ವಿದ್ಯಾರ್ಥಿಗಳು ಜಲಪಾತವನ್ನು ವೀಕ್ಷಿಸಿ ಪುಳಕಿತಗೊಂಡರು.



# ಆಟೋಟ ಸ್ಪರ್ಧೆ

ಶ್ರೀ ದುರ್ಗಾ ಪರಮೇಶ್ವರೀ ಹೈಯರ್ ಸೆಕೆಂಡರಿ ವಿದ್ಯಾಲಯದಲ್ಲಿ ಶಾಲಾ ಮಟ್ಟದ ಆಟೋಟ ಸ್ಪರ್ಧೆಯು ರಕ್ಷಕ ಶಿಕ್ಷಕ ಸಂಘದ ಅಧ್ಯಕ್ಷರಾದ ಶ್ರೀ ಗಿರೀಶ್ ಕುಮಾರ್ ಕಯ್ಯಾರ್ ಇವರ ಅಧ್ಯಕ್ಷತೆಯಲ್ಲಿ ನೆರವೇರಿತು. ಶಾಲಾ ಪ್ರಾಂಶುಪಾಲರಾದ ಶ್ರೀ ಯನ್ ರಾಮಚಂದ್ರ ಭಟ್ ಅತಿಥಿಗಳನ್ನು ಸ್ವಾಗತಿಸಿ ಶುಭಹಾರೈಸಿದರು. ಶಾಲಾ ವ್ಯವಸ್ಥಾಪಕರಾದ ಶ್ರೀ ಯನ್ ಶಂಕರನಾರಾಯಣ ಭಟ್ ಮತ್ತು ಎ ಯು ಪಿ ಶಾಲಾ ಮುಖ್ಯೋಪಾಧ್ಯಾಯರಾದ ಶ್ರೀ ಯನ್ ಮಹಾಲಿಂಗ ಭಟ್ ಕಾರ್ಯಕ್ರಮಕ್ಕೆಶುಭ ಹಾರೈಸಿದರು. ಅಧ್ಯಾಪಕರಾದ ಶ್ರೀ ರಾಮಕೃಷ್ಣ ಭಟ್ ವಂದಿಸಿ, ಶ್ರೀ ಗೋವಿಂದ ಭಟ್ ಕಾರ್ಯಕ್ರಮವನ್ನು ನಿರೂಪಿಸಿದರು. ಶಾಲಾ ದೈಹಿಕ ಶಿಕ್ಷಕರಾದ ಶ್ರೀ ಸಂತೋಷ್ ಕುಮಾರ್ ಇವರ ನೇತೃತ್ವದಲ್ಲಿ ಅಧ್ಯಾಪಕರ ಸಹಾಯದೊಂದಿಗೆ ಸುಮಾರು 13 ಕ್ಕೂ ಹೆಚ್ಚು ವಿಭಾಗ ಕ್ರೀಡೆಗಳಲ್ಲಿ 300 ಕ್ಕೂ ಮಿಕ್ಕಿ ವಿದ್ಯಾರ್ಥಿಗಳು ಪಾಲ್ಗೊಂಡರು.



SDPHSD

# ಸ್ವಾತಂತ್ರ ದಿನಾಚರಣೆ

ಶ್ರೀ ದುರ್ಗಾ ಪರಮೇಶ್ವರೀ ಹೈಯರ್ ಸೆಕೆಂಡರಿ ಶಾಲೆ ಧರ್ಮತ್ತಡ್ಕದಲ್ಲಿ 72 ನೇ ಸ್ವಾತಂತ್ರ ದಿನಾಚರಣೆ ಪಿ ಟಿ ಎ ಅಧ್ಯಕ್ಷರಾದ ಶ್ರೀ ಗಿರೀಶ್ ಕುಮಾರ್ ಕಯ್ಯಾರ್ ಇವರ ಅಧ್ಯಕ್ಷತೆಯಲ್ಲಿ ಜರಗಿತು . ಶಾಲಾ ಪ್ರಾಂಶುಪಾಲರಾದ ಶ್ರೀ ರಾಮಚಂದ್ರ ಭಟ್ ಧ್ವಜಾರೋಹಣ ಗೈಯುವುದರೊಂದಿಗೆ ಆರಂಭಗೊಂಡ ಕಾರ್ಯಕ್ರಮದಲ್ಲಿ ನಿವೃತ್ತ ಸಿ ಆರ್ ಪಿಫ್ ಯೋಧ ಶ್ರೀ ಅಯ್ಯಪ್ಪ ಮಣಿಯಾಣಿ ಮತ್ತು ಪ್ಯಾರಾ ಮಿಲಿಟರಿ ಕಮಾಂಡೋ ಆಗಿರುವ ಶ್ರೀ ಸನೇಶ್ ಕುಮಾರ್ ಉಪ್ಪಳ ಇವರು ಮುಖ್ಯ ಅತಿಥಿಗಳಾಗಿ ಪಾಲ್ಗೊಂಡರು. ಮುಖ್ಯ ಅಥಿತಿಗಳಿಂದ ಮಿಲಿಟರಿ ಸೇನೆ ಮತ್ತು ದೇಶಕ್ಕೆ ಅದರ ಮಹತ್ವದ ಕುರಿತು ಸಂವಾದ ಕಾರ್ಯಕ್ರಮವು ನಡೆಯಿತು. ರಾಜ್ಯ ಪ್ರಶಸ್ತ ವಿಜೇತ ಶ್ರೀ ಶಂಕರ ಕಾಮತ್ ಚೇವಾರ್ ಮತ್ತು ಶಾಲಾ ಮ್ಯಾನೇಜರ್ ಶ್ರೀ ಯನ್ ಶಂಕರನಾರಾಯಣ ಭಟ್ ಕಾರ್ಯಕ್ರಮಕ್ಕೆ ಶುಭ ಹಾರೈಸಿದರು ವಿದ್ಯಾರ್ಥಿಗಳಿಂದ ವಿವಿಧ ಕಾರ್ಯಕ್ರಮವು ಜರಗಿದವು ಶಾಲಾ ಪ್ರಾಂಶುಪಾಲರಾದ ಶ್ರೀ ರಾಮಚಂದ್ರ ಭಟ್ ಗಣ್ಣರನು ಸ್ವಾಗತಿಸಿ, ಶ್ರೀ ಶಿವಪ್ರಸಾದ್ ವಂದಿಸಿದರು. ಶಿಕ್ಷಕರಾದ ಶ್ರೀ ಈ ಯಚ್ ಗೋವಿಂಧ ಭಟ್ ಕಾರ್ಯಕ್ರವನ್ನು ನಿರೂಪಿಸಿದರು ಸಿಹಿತಿಂಡಿ ವಿತರಣೆಯೊಂದಿಗೆ ಕಾರ್ಯಕ್ರಮ ಸಂಪನ್ನಗೊಂಡಿತು



# ಯಕ್ಷಗಾನ ತಾಳಮದ್ದಳೆ

ಹತ್ತನೇ ತರಗತಿಯ ಕನ್ನಡ ಪಠ್ಯಪುಸ್ತಕದ ಪಾಠಭಾಗವಾದ ಸಿದ್ದಕಟ್ಟೆ ವಿಶ್ವನಾಥ ಶೆಟ್ಟಿ ವಿರಚಿತ ಶ್ರೀ ಕೃಷ್ಣ ಪರಂಧಾಮ ಪ್ರಸಂಗದ ಆಯ್ದಭಾಗವಾದ ಕಾಲಪುರುಷನ ಲೀಲೆ ಯಕ್ಷಗಾನ ಪ್ರಸಂಗದ ತಾಳಮದ್ದಳೆ ಧರ್ಮತ್ತಡ್ಕ ದುರ್ಗಾಪರಮೇಶ್ವರಿ ಪ್ರೌಢ ಶಾಲೆಯಲ್ಲಿ ಜರಗಿತು.

ಭಾಗವತಿಕೆಯಲ್ಲಿ ರಾಮಪ್ರಸಾದ್ ಮಯ್ಯ ಕೂಡ್ಲು,
ಅರ್ಥಗಾರಿಕೆಯಲ್ಲಿ ಗುರುರಾಜ ಹೊಳ್ಳ ಬಾಯಾರು,
ಮದ್ದಳೆಯಲ್ಲಿ ಬಾಲಕೃಷ್ಣ ಆಚೆಗೋಳಿ ಸಹಕರಿಸಿದರು ಹಾಗೂ ಅಧ್ಯಾಪಕರು ವಿದ್ಯಾರ್ಥಿಗಳು ಸಹಕರಿಸಿದರು.



SDPHSD

# ದೋಣಿ ಸಾಗಲಿ

ದೋಣಿ ಸಾಗಲಿ ಮುಂದೆ ಹೋಗಲಿ ದೂರ ತೀರವ ಸೇರಲಿ
ಬೀಸು ಗಾಳಿಗೆ ಬೀಳುತೇಳುವ ತೆರೆಯ ಮೇಗಡೆ ಹಾರಲಿ

ಹೊನ್ನಗಿಂಡಿಯ ಹಿಡಿದು ಕೈಯೊಳು ಹೇಮವಾರಿಯ ಚಿಮುಕಿಸೆ
ಮೇಘಮಾಲೆಗೆ ಬಣ್ಣವೀಯುತ ಯಕ್ಷಲೋಕವ ವಿರಚಿಸೆ
ನೋಡಿ ಮೂಡಣದಾ ದಿಗಂತದಿ ಮೂಡುವೆಣ್ಣಿನ ಮೈಸಿರಿ
ರಂಜಿಸುತ್ತಿದೆ ಚೆಲುವೆಯಾಕೆಗೆ ಸುಪ್ರಭಾತವ ಬಯಸಿರಿ

ಕೆರೆಯ ಅಂಚಿನ ಮೇಲೆ ಮಿಂಚಿನ ಹನಿಗಳಂದದಿ ಹಿಮಮಣಿ
ಮಿಂಚುತೀರ್ಪುವು ಮೂಡುತೈತರೆ ಬಾಲಕೋಮಲ ದಿನಮಣಿ
ಹಸಿರು ಜೋಳದ ಹೊಲದ ಗಾಳಿಯು ತೀಡಿ ತಣ್ಣಗೆ ಬರುತಿದೆ
ಹುದುಗಿ ಹಾಡುವ ಮತ್ತ ಕೋಕಿಲ ಮಧುರ ವಾಣಿಯ ತರುತಿದೆ

ದೂರ ಬೆಟ್ಟದ ಮೇಲೆ ತೇಲುವ ಬಿಳಿಯ ಮೋಡವ ನೋಡಿರಿ
ಅದನೆ ಹೋಲುತ ಅಂತೆ ತೇಲುತ ದೋಣಿಯಾಟವನಾಡಿರಿ
ನಾವು ಲೀಲಾಮಾತ್ರ ಜೀವರು ನಮ್ಮ ಜೀವನ ಲೀಲೆಗೆ
ನೆನ್ನೆ ನೆನ್ನೆಗೆ ಇಂದು ಇಂದಿಗೆ ಇರಲಿ ನಾಳೆಯು ನಾಳೆಗೆ

# THANKS